ಫ್ಯಾಷನ್

# ಉಡುಗೆಯಲ್ಲಿ ನ್ಯೂಸ್‌ಪ್ರಿಂಟ್ ಚಿತ್ತಾರ

**ಇದೀಗ ಫ್ಯಾಷನ್ ಲೋಕದಲ್ಲೂ 'ನ್ಯೂಸ್‌ಪ್ರಿಂಟ್' ಸದ್ದು ಮಾಡಲಾರಂಭಿಸಿದೆ. ಪತ್ರಿಕೆ ಮಾದರಿಯ ಫ್ಯಾಬ್ರಿಕ್ ಹಲವು ವಿನ್ಯಾಸಗಳಲ್ಲಿ ಬಂದಿದ್ದು ಟ್ರೆಂಡ್ ಅನ್ನೇ ಸೃಷ್ಟಿಸಿದೆ.**

■ ಆಶಾ ಎಸ್. ಕುಲಕರ್ಣಿ





ಸುಮಾರು ಹದಿನೈದು ವರ್ಷಗಳ ಹಿಂದಿನ ಮಾತು. ಮಹಿಳೆಯರ ಸೀರೆ, ಕೋಟು, ಜಾಕೆಟ್, ಸ್ಕರ್ಟ್... ಎಲ್ಲದರಲ್ಲೂ ನ್ಯೂಸ್ ಪ್ರಿಂಟ್ ವಿನ್ಯಾಸವೇ. ಅಷ್ಟೇ ಏಕೆ, ಬ್ಯಾಗ್‌ಗಳ ಮೇಲೆ, ಉಗುರುಗಳ ಮೇಲೆ, ಪಾದರಕ್ಷೆಗಳ ಮೇಲೆ ನ್ಯೂಸ್ ಪ್ರಿಂಟ್‌ಗಳದ್ದೇ ಚಿತ್ತಾರ. ಆಮೇಲೆ ಕೆಲಕಾಲ ಇದು ಫ್ಯಾಷನ್ ಲೋಕದಿಂದ ಮರೆಯಾಯಿತು. ಈಗ ಮತ್ತೆ ಉಡುಪಿನ ಮೇಲಿನ ಸುದ್ದಿ ಲೋಕ ಸದ್ದು ಮಾಡುತ್ತಿದೆ. ಹಳೆಯ ಫ್ಯಾಷನ್ ಮತ್ತೆ ಮತ್ತೆ ಹೊಸ ರೂಪ ತಾಳಿ ಫ್ಯಾಷನ್ ಪ್ರಿಯರ ಮನಗೆಲ್ಲುತ್ತಿದೆ. ಅದೂ ಹೊಸ ವಿನ್ಯಾಸ, ಹೊಸ ರೂಪ ತಾಳಿ ಫ್ಯಾಷನ್ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಆಧುನಿಕ ಮನೋಭಾವದ ಯುವತಿಯರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಈ ಪೇಪರ್ ಪ್ರಿಂಟ್ ಉಡುಗೆ ಸೆಲೆಬ್ರಿಟಿ, ಮಾಡೆಲ್‌ಗಳಿಗೆ ಹಾಟ್ ಫೇವರೆಟ್ ಕೂಡ ಆಗಿದೆ.

ಬ್ರಿಟಿಷರ ಕಾಲದಿಂದಲೂ ನ್ಯೂಸ್ ಪೇಪರ್‌ಗಳು ನಮ್ಮ ಜೀವನಾಡಿಗಳಂತೇ ಇವೆ. ಕಾರಣ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪತ್ರಿಕೆಗಳು ಮುಖ್ಯ ಪಾತ್ರ ನಿರ್ವಹಿಸಿದ್ದವು. ದೇಶ ವಿದೇಶದ ಸುದ್ದಿಗಳ ಜೊತೆಗೆ ನಮ್ಮ ದೇಶದಲ್ಲಿ ನಡೆಯುವ ವಿದ್ಯಮಾನಗಳನ್ನು ಅರಿಯಲು ಸಾಮಾನ್ಯರಲ್ಲಿ ಸಾಮಾನ್ಯ ಜನರೂ ಅಂದಿನ ಕಾಲದಲ್ಲಿ ನ್ಯೂಸ್ ಪೇಪರ್‌ಗಳನ್ನು ಕೊಂಡು ಓದಿ ಜ್ಞಾನವನ್ನು ಸಂಪಾದಿಸುತ್ತಿದ್ದರು. ಆ ಕಾರಣದಿಂದ ಇಂದಿನ ತಂತ್ರಜ್ಞಾನ ಯುಗದಲ್ಲಿಯೂ ಪತ್ರಿಕೆಗಳು ತಮ್ಮ ಸ್ಥಾನವನ್ನು ಬಿಟ್ಟು ಕೊಡದೆ ಗಟ್ಟಿಯಾಗಿ ನೆಲೆ ನಿಂತಿವೆ. ಈಗ ಪತ್ರಿಕೆಗಳನ್ನೇ ಹೋಲುವ ಬಗೆ ಬಗೆಯ ಉಡುಪುಗಳು ಹೊಸ ಟ್ರೆಂಡ್ ಅನ್ನೇ ಸೃಷ್ಟಿಸುತ್ತಿವೆ.

ಅಂದಿನ ದಿನಗಳಲ್ಲಿ ಬ್ರಿಟಿಷ್ ಮಹಿಳೆಯರು ಪೇಪರ್ ಪ್ರಿಂಟ್ ಫ್ಯಾಬ್ರಿಕ್‌ನ ಗೌನ್, ಮಿಡಿ, ಟಾಪ್‌ಗಳನ್ನು ತೊಡುತ್ತಿದ್ದರು. ಮೊದಲು ಹಾಲಿವುಡ್ ನಟನಟಿಯರಿಂದ ಪ್ರಾರಂಭವಾದ ಈ ಟ್ರೆಂಡ್, ಬಾಲಿವುಡ್ ಸೆಲೆಬ್ರಿಟಿಗಳಿಂದ ಹಿಡಿದು ಮಾಡೆಲ್‌ಗಳನ್ನು ಪ್ರವೇಶಿಸಿ ಇದೀಗ ಸಾಮಾನ್ಯ ಯುವಕ ಯುವತಿಯರು ಧರಿಸುವ ಉಡುಪುಗಳಲ್ಲಿ ಪೇಪರ್ ಪ್ರಿಂಟ್ ವಿನ್ಯಾಸ ಕಾಣಿಸಿಕೊಳ್ಳುತ್ತಿದೆ. ಈ ಪೇಪರ್ ಪ್ರಿಂಟ್ ಆಧುನಿಕ ಉಡುಪುಗಳಿಗೆ ಮಾತ್ರವಲ್ಲ ಸಾಂಪ್ರದಾಯಿಕ ಬಟ್ಟೆಗಳಲ್ಲಿಯೂ ತನ್ನ ಛಾಪು ಮೂಡಿಸುತ್ತಿದೆ.

ಸಿಲ್ಕ್, ಪಾಲಿಯೆಸ್ಟರ್, ರಾ ಸಿಲ್ಕ್ ಹಾಗೂ ಪ್ಯೂರ್ ಕಾಟನ್ ಮುಂತಾದ ಸೀರೆಗಳಲ್ಲಿ ಈ ಪೇಪರ್ ಪ್ರಿಂಟ್ ವಿನ್ಯಾಸ ಟ್ರೆಂಡಿಯಾಗಿದೆ. ಈ ವಿನ್ಯಾಸಗಳ ಸೀರೆ ಜೊತೆಗೆ ಡಿಸೈನರ್ ಬ್ಲೌಸ್‌ಗಳಲ್ಲಿ